**ಡಾ.ಎಸ್.ಬಿ.ಚನ್ನಗೌಡ್ರ.** ಎಂ.ಎ ಪಿಹೆಚ್.ಡಿ
ಮುಖ್ಯಸ್ಥರು ಕನ್ನಡ ವಿಭಾಗ
ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು. ಜಂಗಮವಾಣಿ– ೯೪೪೮೭೮೯೩೯೦.

# ಸರ್ವಜ್ಞ ಕವಿಯ ವ್ಯಕ್ತಿತ್ವ

## ಪೀಠಿಕೆ

ಕನ್ನಡ ಸಾಹಿತ್ಯ ಚರಿತ್ರೆಯ ಭವ್ಯ ಪರಂಪರೆಯಲ್ಲಿ ಸಾಮಾನ್ಯರಾಡುವ ಮಾತಿನ ಮೂಲಕ ಜನಪ್ರಿಯತೆ ಗಳಿಸಿದ ಶ್ರೇಷ್ಠ ವ್ಯಕ್ತಿತ್ವ. ಸರಳ ಸಜ್ಜನಿಕೆಯ ಸಾಕಾರಮೂರ್ತಿ, ಸರ್ವಜ್ಞನೆಂಬುದು ಹೆಮ್ಮೆಯ ವಿಚಾರ. ಈತನ ಕಾಲದ ಬಗ್ಗೆ ಸಮರ್ಪಕವಾದ ದಾಖಲೆಗಳ ಕೊತರೆಯಿಂದ ಈತನ ವಯಕ್ತಿಕ ಬದುಕು ಕೂಡ ಅಸ್ಪಷ್ಟವಾಗಿದೆ. ಆದರೆ ವಿದ್ವಾಂಸರ ತರ್ಕಬದ್ದ ವಿಚಾರ ಸರಣಿಗಳಿಂದ ಬಹುಜನ ಗಟ್ಟಿ ಅಭಿಪ್ರಾಯದಿಂದ  ಈತನ ಕಾಲವನ್ನು ಕ್ರಿ.ಶ.ಸುಮಾರು ೧೫೫೦–೧೬೦೦ ಎಂದು ತಿಳಿಯಲಾಗಿದೆ. ಈತನ ತಾಯಿ ಅಬಲೂರಿನ ಕುಂಬಾರ ಮಾಳಿ ಅಥವಾ ಮಾಳವ್ವ. ತಂದೆ ಮಾಸೂರ ಬಸವರಸ ಎಂದು ಗುರುತಿಸಲಾಗಿದೆ. ಸರ್ವಜ್ಞನ ವಚನಗಳು ಓದು–ಬರೆಹ ಬಾರದ ವ್ಯಕ್ತಿಗಳಿಗೂ ಅರ್ಥವಾಗಿ ಮನಸ್ಸಿನಲ್ಲಿ ಉಳಿದು ಹೃದಯಾಂತರಾಳದಲ್ಲಿ ಉಳಿಯುತ್ತವೆ. ತಮಿಳುನಾಡಿನ ತಿರುವಳ್ಳುವರ್, ತೆಲುಗಿನ–ವೇಮನರಂತೆ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ ವ್ಯಕ್ತಿ ಸರ್ವಜ್ಞ.

ಸರ್ವಜ್ಞ ಕನ್ನಡ ನಾಡು, ಭಾರತ ಕಂಡ ಅಪರೂಪದ ಮಹಾಕವಿ,ಸಂತ. ಇಂದಿಗೂ ಅವನ ವಚನಗಳಿಲ್ಲದೆ ಜನರು ಮಾತನಾಡಲಾರರು. ಅವನ ವಚನಗಳನ್ನು ತಮ್ಮ ಬದುಕಿನ ಎಲ್ಲ ಕ್ಷಣಗಳಲ್ಲಿ ದಿನದಿನವೂ ನೆನೆಯುತ್ತಾರೆ. ಅವನ ವಚನಗಳು ಜೀವನ ವಿವೇಕದ ಕನ್ನಡಿ ಆಗಿವೆ. ಈ ದೃಷ್ಟಿಯಿಂದ ಆತ ಸಾರ್ವಕಾಲಿಕ. ಸರ್ವಜ್ಞನು ಕಾಲ ಮಾತ್ರದಿಂದ ಅಂದಿನವನಾದರೂ ಮನೋಧರ್ಮ ಯುಗಧರ್ಮಗಳ ದೃಷ್ಟಿಯಿಂದ ಇಂದಿನವನಾಗಿದ್ದಾನೆ. ಲೌಕಿಕದಲ್ಲಿ ಸಮಾಜವಾದಿಯಾದ ಈತ ಅಂತರಂಗದಲ್ಲಿ ಅನುಭಾವಿ, ದಾರ್ಶನಿಕ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ರಾಂತಿಕಾರಿ. ಬಂಡಾಯ ಮನೋಧರ್ಮ ಹೊಂದಿರುವ ಈತ ಸಮಾಜದಲ್ಲಿ ಕಣ್ಣಿಗೆ ಕಂಡದ್ದನ್ನು ಸಮುದಾಯದ ಜಾಗೃತಿಗಾಗಿ ಮಾತಿನ ಚಾಟಿಏಟು ಬೀಸಿದವನು. ಜನಪದ ಸತ್ವದ ತ್ರಿಪದಿ ಬಳಸುವುದರ ಮೂಲಕ ಕನ್ನಡದ ಪ್ರಜ್ಞೆ ಹಾಗೂ ಭಾಷೆಯ ಅನಂತ ಸಾಧ್ಯತೆಗಳನ್ನು ವಿಸ್ತರಿಸಿದವನು. ಹೀಗಾಗಿ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಅವನೊಂದು ಮುಕುಟಪ್ರಾಯ. ಆದರ್ಶ ಸಮಾಜ ಹೇಗಿರಬೇಕೆಂದು ತೋರಿಸಿಕೊಟ್ಟ ಸರ್ವಜ್ಞ ಸಮುದಾಯ ಹಾಗೂ ಕನ್ನಡ ಪ್ರಜ್ಞೆ ಮೂಡಿಸಿ ವಿಶ್ವಕವಿಯೆನಿಸಿ ವಿಶ್ವಮಾನ್ಯವಾದ ಬದುಕನ್ನು ಪ್ರೀತಿಸುವ, ಟೀಕಿಸುವ ಆ ಮೂಲಕವೇ ಆದರ್ಶ ಸಮಾಜ ನಿರ್ಮಾಣಕ್ಕೆ ದಾರಿ ಹುಡುಕುವುದನ್ನು ತೋರಿಸಿ ಕೊಟ್ಟ ಸರ್ವಜ್ಞ  ಹಿಂಡನಗಲಿದ ಮದಗಜದಂತೆ ಒಂಟಿಯಾದರೂ ಕ್ರಿಯಾಶೀಲವಾಗಿ ಹೊಸದನ್ನೆ ಕಟ್ಟಲು ಬಯಸಿದವನು.

ಸರ್ವಜ್ಞ ಲೋಕಸಂಚಾರಿಯಾಗಿ ಬರಿ ಅನ್ಯಾಯದ ವಿರುದ್ದ ಬಂಡೆದ್ದು ನಿಲ್ಲದೆ ಸಮಾಜದ ಪ್ರತಿಯೊಂದು ವಿಷಯಗಳ ಬಗ್ಗೆ ಗಮನವಿಟ್ಟು ಅಲ್ಲಿರುವ ಓರೆ ಕೋರೆಗಳನ್ನು ಅನಾಚಾರ ಅತ್ಯಾಚಾರಗಳನ್ನು ಕೂಲಂಕಷವಾಗಿ ಅರಿತುಕೊಂಡು ಎಚ್ಚರಿಕೆ ನೀಡುವುದರ ಜೊತೆ–ಜೊತೆಗೆ ತಿಳಿವಳಿಕೆಯನ್ನು ನೀಡುತ್ತಾನೆ. ನಾಡಿನ ಉದ್ದಗಲಕ್ಕೂ ಹಳ್ಳಿ ಹಳ್ಳಿಗಳನ್ನು ಸುತ್ತಿ ಹಳ್ಳಿಯ ಬಾಳು ಬದುಕಿನಲ್ಲಿ ಬೆರೆತು ಸಮಕಾಲೀನ ಸಮಾಜದ ಸಾಕ್ಷಿಪ್ರಜ್ಞೆಯಾಗಿ ನಿಲ್ಲುತ್ತಾನೆ. ಆ ಮೂಲಕ ಸಮಾಜದ ಮುಖವಾಡಗಳನ್ನೆಲ್ಲ ಹರಿದು ಹಾಕಿ ನಿಜ ಸ್ವರೂಪ ತೋರಿಸಿಕೊಡುವುದರೆಡೆಗೆ ಮುಖಮಾಡುತ್ತಾನೆ. ದೇವರು ಧರ್ಮ ಧಾರ್ಮಿಕ ವಿಧಿ ವಿಧಾನಗಳು ಅಲ್ಲದೆ ಅಧರ್ಮ ಅನೀತಿ ಬಾಹ್ಯಾಡಂಬರ ಮೂಢನಂಬಿಕೆ, ಪಕ್ಷಪಾತ, ಬೂಟಾಟಿಕೆ, ಮೋಸಗಾರಿಕೆ, ದುರ್ವರ್ತನೆ, ಮೊದಲಾದವು ಸಮಾಜದಲ್ಲಿ ತಾಂಡವವಾಡುತ್ತಿರುವಾಗ ಕಂಡದ್ದನ್ನು ಕೆಂಡದಂತೆ ಸರ್ವಜ್ಞನ ಅಂತರಂಗದ ವಚನಗಳು ಅಭಿವ್ಯಕ್ತಗೊಂಡವು.  ಆ ವಚನಗಳ ಮೂಲಕ ಲೋಕಾನುಭವದೊಡನೆ ಜನರ ಮನಸ್ಸನ್ನು ಪರಿವರ್ತಿಸುತ್ತ, ಅವರಲ್ಲಿರುವ ಅಂಧಕಾರದ ಮೌಢ್ಯವನ್ನು ವಿರೋಧಿಸಿ ಖಂಡನೆಯ ಧ್ವನಿಯಿಂದ ಪ್ರತಿಭಟಿಸುತ್ತಾನೆ.

ಕನ್ನಡ ಸಾಹಿತ್ಯ ನಭೋಮಂಡಲದಲ್ಲಿ ಪಂಪ ರನ್ನರಂತಹ ಮಹಾ ಕವಿಗಳನ್ನು, ನೇಮಿ ಷಡಕ್ಷರರಂತಹ ರಸ ಕವಿಗಳನ್ನು, ಲಕ್ಷ್ಮೀಶ ಕುಮಾರವ್ಯಾಸರಂತಹ ಕವಿಕೋಗಿಲೆಗಳನ್ನು, ನಿಜಗುಣ ಪುರಂದರರಂತಹ ಋಷಿಕವಿಗಳನ್ನು, ನಾವು ಪ್ರಕಾಶಮಯವಾದ ತಾರೆಗಳೆಂದು ಭಾವಿಸಿದರೆ (Personality) ಸ್ವಾತಂತ್ರ್ಯತಮ ವ್ಯಕ್ತಿತ್ವದ ದೆಸೆಯಿಂದ ಸರ್ವಜ್ಞಮೂರ್ತಿಯನ್ನು ದ್ರುವನಕ್ಷತ್ರವೆಂದೇ ಕರೆಯಬೇಕಾಗುತ್ತದೆ.

ಸಮಾಜ ಪರಿವರ್ತನೆಗಾಗಿಯೇ ಹುಟ್ಟಿದವನೆಂಬಂತೆ ಸರ್ವಜ್ಞ ಹುಟ್ಟಿದ ಕಾಲಕ್ಕೆ ದೇವರು ಧರ್ಮ ಹಾಗೂ ಧಾರ್ಮಿಕ ವಿಧಿ–ವಿಧಾನಗಳ ನಿಜವಾದ ಅರ್ಥಸ್ವರೂಪ ಹೊರಟು ಹೋಗಿ, ಸಮಾಜದಲ್ಲಿ ಅಧರ್ಮ, ಅನೀತಿ ಬಾಹ್ಯಾಡಂಬರಗಳು ತಲೆಯೆತ್ತಿ, ಸಮಾಜವೆಂಬುದು ಬೂಟಾಟಿಕೆಯ ಮೋಸಗಾರಿಕೆಯ ತಾಣವಾಗಿತ್ತು. ಅಂತಹ ಸಂದರ್ಭದಲ್ಲಿ ಯಾವುದೇ ಜಾತಿ ಧರ್ಮ ಮತಗಳಿಗಂಟಿಕೊಳ್ಳದ ಮಹಾ ಸಮಾಜ ಸುಧಾರಕನ ಅಗತ್ಯತೆಯ ಕೂಗಿನ ಕರೆಗೆ ಅವತರಿಸಿದವನಂತೆ ಈ ಪುಣ್ಯಭೂಮಿ ಕನ್ನಡನಾಡಿನಲ್ಲಿ ಸರ್ವಜ್ಞ ಹುಟ್ಟಿ ಬಂದದ್ದು ಈ ನಾಡಿನ ಭಾಗ್ಯವೇ ಸರಿ.

ಸರ್ವಜ್ಞ ಕವಿ ಕನ್ನಡ ನಾಡಿನ ಮನೆಯ ಕವಿ. ಜಾನಪದ ಚಕ್ರವರ್ತಿ ಮಧ್ಯಕಾಲೀನ ದೇಸಿ ಸಂಭ್ರಮದ ಸಾರ್ವಭೌಮ ಸರ್ವಜ್ಞ ಜನಸಾಮಾನ್ಯರೊಂದಿಗೆ ಬೆರೆತು ಅವರ ಸರಳವಾದ ಭಾಷೆ ನುಡಿಗಟ್ಟುಗಳಲ್ಲಿಯೇ ತ್ರಿಪದಿಗಳನ್ನು ರಚಿಸುವುದರ ಮೂಲಕ ಜನತೆಯ ಕವಿ ಎನಿಸಿಕೊಂಡಿದ್ದಾನೆ. ಸಾಹಿತ್ಯವೆಂದರೆ ಜನಜೀವನದ ಪ್ರತಿಬಿಂಬ ಎನ್ನುವುದನ್ನು ಅಕ್ಷರಶಃ ತೋರಿಸಿದ್ದಾನೆ. ತನ್ನ ವಚನಗಳ ಮೂಲಕ ವಿವೇಕ ಮತ್ತು ವ್ಯವಹಾರ ಜ್ಞಾನಗಳೆರಡನ್ನು ಬೋಧಿಸಿದ ಸರ್ವಜ್ಞ ಒಪ್ಪುವ ಮೌಲ್ಯಗಳನ್ನು ಪ್ರಶಂಸಿಸುತ್ತ, ಅಪಮೌಲ್ಯಗಳನ್ನು ಟೀಕಿಸುತ್ತ ಲೋಕಕ್ಕೆ ಗುರುವಾಗುತ್ತಾನೆ. ತಾನು ಕಂಡ ಸಮಾಜವು ಹೇಗಿತ್ತು? ಆ ಸಮಾಜ ಹೇಗಿರಬೇಕೆಂಬುದರ ವಿವೇಕ ಆತನ ವಚನಗಳಲ್ಲಿದೆ. ಈ ದೃಷ್ಟಿಯಿಂದ ಆತನೊಬ್ಬ ಸಾಮಾಜಿಕ ವೈದ್ಯನಾಗಿದ್ದಾನೆ. ಹಾಗಾಗಿ ಸರ್ವಜ್ಞನನ್ನು ಕೇವಲ ಕವಿಯೆಂದು ತಿಳಿಯುವ ಹಾಗಿಲ್ಲ.

ಕರದಿ ಕಪ್ಪರವುಂಟು । ಹಿರಿದೊಂದು ನಾಡುಂಟು ।
ಹರನೆಂಬ ದೈವವೆಮಗುಂಟು ತಿರಿವರಿಂ
ಸಿರಿವಂತರಾರು ಸರ್ವಜ್ಞ ॥

ಒಂದು ಕೈಯಲ್ಲಿ ಕೋಲು ಇನ್ನೊಂದು ಕೈಯಲ್ಲಿ (ಕಪ್ಪರ) ಭಿಕ್ಷಾ ಪಾತ್ರೆ, ಹಿಡಿದು ಸಿಕ್ಕರೂ ಸರಿ ಸಿಗದಿದ್ದರೂ ಸರಿ ಎಂದು, ಸಿಗದಿದ್ದಾಗ "ಹರನೆಂಬ ದೈವ ಎನಗುಂಟು" ಎನ್ನುತ್ತಾ ಜಂಗಮನಂತೆ ಸಿಕ್ಕ ಕಡೆಯೆಲ್ಲ ತಿರಿಯುತ್ತ, ನನಗಿಂತ ಸಿರಿವಂತರಾರು ಎಂಬ ಆತ್ಮವಿಶ್ವಾಸ ಹೊಂದಿ ನಾಲ್ಕು ದಿಕ್ಕುಗಳಿಗೂ ಸಂಚರಿಸುತ್ತಾನೆ. ಭಿಕ್ಷುದ ತಂಗುಳವೇ ಲೇಸು ಸರ್ವಜ್ಞ ಎಂದು ತುಂಡುಗಂಬಳಿ ಹೊದೆದು ಹಿಂಡನಗಲಿದ ಮದಗಜದಂತೆ ಲೋಕಪರ್ಯಟನೆ ಮಾಡುತ್ತ ಸಮಾಜ ಪರಿವರ್ತನೆಯತ್ತ ಮುಖ ಮಾಡುತ್ತಾನೆ.

ಕನ್ನಡನಾಡಿನ ಜನಸಾಮಾನ್ಯ ಕವಿಯಾದ ಈತ ಹಾಡಿದುದು ಕವಿ ಪಂಡಿತ ವಿದ್ವಾಂಸರಿಗಲ್ಲ. ವೇದಕಾಲದಿಂದಲೂ ಕಡೆಗಣಿಸಲ್ಪಟ್ಟ ಸ್ತ್ರೀ, ಶೂದ್ರ ಹಾಗೂ ಪಾಮರರಿಗೆ. ಅಂತಹ ಕವಿ ಪಂಡಿತರಿಗೆ ಹೇಳಬೇಕಾದ ಅವಶ್ಯಕತೆ ಇಲ್ಲವೆಂದು ಸರ್ವಜ್ಞನಿಗೆ ಗೊತ್ತಿದ್ದ ಸಂಗತಿಯೆ. ಆ ಕಾರಣದಿಂದ ತನ್ನ ತ್ರಿಪದಿಗಳನ್ನೂ ಸ್ತ್ರೀ, ಶೂದ್ರ ಹಾಗೂ ಪಾಮರರಿಗಾಗಿಯೇ ಹಾಡಿದ. ಅದನ್ನು ಇಂದಿನವರೆಗೂ ಉಳಿಸಿ ಬೆಳಸಿಕೊಂಡು ಬಂದವರು ಸಾಮಾನ್ಯರೇ ವಿನಹಃ ಪಂಡಿತ ಕವಿ ವರ್ಗವಲ್ಲ ಎಂಬುದಕ್ಕೆ ಸಾಕ್ಷೀಕರಿಸಬೇಕೆಂದರೆ ಯಾವ ಕವಿಗಳಾಗಲಿ, ಪಂಡಿತರಾಗಲಿ, ಈತನ ವಚನಗಳನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸದಿರುವುದು. ೧೨ನೇ ಶತಮಾನದ ಶರಣರಿಂದ ಪ್ರೇರಣೆಗೊಂಡ ಈತ ಅವರ ವಿಚಾರಗಳನ್ನು ತನ್ನ ವಚನಗಳಲ್ಲಿ ಪಡಿಮೂಡಿಸಿದ್ದುಂಟು. ಶರಣರ ಏಕದೇವೋಪಾಸನ ಪದ್ಧತಿ, ಮೂರ್ತಿ ಪೂಜೆ, ಅವಿವೇಕ, ನಿರಸನ, ಅಹಿಂಸಾ ಪ್ರತಿಪಾದನೆ, ಜಾತಿಭೇದ ನಿರಾಕರಣ, ಕ್ಷುದ್ರದೇವತಾ ತಿರಸ್ಕಾರ, ರಾಜತ್ವ ದಿಕ್ಕಾರ ಖಂಡಿತವಾದಿತನ, ನಡೆ ನುಡಿಯಲ್ಲಿ ನಿಷ್ಠೂರತೆ, ಮೂಢನಂಬಿಕೆ, ಕಂದಾಚಾರ ಇಂತಹ ಅನೇಕ ವಿಚಾರಗಳು ಶರಣರಿಂದಲೇ ಪ್ರೇರಣೆಗೊಂಡು ಆ ಶರಣರಿಗಿಂತಲೂ ಸಹಜ ಸುಂದರ ಮತ್ತು ರಸಮಯವಾದ ವಚನಗಳನ್ನು ನಿರೂಪಿಸುತ್ತಾನೆ. ಈ ನೆಲೆಯಲ್ಲಿ ಡಾ.ವಿ.ಕೃ.ಗೋಕಾಕರವರು ಹೇಳುವಂತೆ ಅವನು ಅನಂತದ ದರ್ಶನವನ್ನು ಮುಂದುವರೆಸಿಕೊಂಡು ಅತೀತದ ಸ್ವಂತ ಶ್ರೀಮಂತಾನುಭವಗಳನ್ನು ಹಾಡುತ್ತ ಯೋಗಿಯಾಗಿ ರಚಿಸಿದ ಕಾವ್ಯವಿದೆ.

ಸರ್ವಜ್ಞನಿಗೆ ಭಗವಂತನಲ್ಲಿ ಅದಮ್ಯವಾದ ಶ್ರದ್ಧೆ, ಭಗವಂತನ ಕುರಿತ ಅವನ ಕವಿತ್ವ ನೋಡುವುದಾದರೆ ಅವನ ಬರಹದಲ್ಲೇ ದರ್ಶನವನ್ನು ಕಾಣುತ್ತಾನೆ. ಆ ದರ್ಶನದ ಪ್ರಶಾಂತತೆ ಸೌಂದರ್ಯ ಅತ್ಯಂತ ಪರಿಣಾಮಕಾರಿಯಾಗಿ ಗೋಚರಿಸುತ್ತವೆ. ಆ ಅನಂತ ದರ್ಶನದಲ್ಲಿ ಹಾಡಿದ ಒಂದು ವಚನ ಹೀಗಿದೆ.

ಇಂಗಿನೊಳು ನಾಥವನು । ತೆಂಗಿನೊಳಗೆಳನೀರ ।
ಭೃಂಗ ಕೋಗಿಲೆಯ ಕಂಠದೊಳು ಗಾಯನವ ।
ತುಂಬಿದವರಾರು ಸರ್ವಜ್ಞ॥

ಆಚಾರ ಪದ್ಧತಿಗಳ ಅಸಂಬದ್ಧತೆಯನ್ನೂ ನಿಜವಾದ ಜ್ಞಾನದ ವಿಷಯದಲ್ಲಿ ಅವುಗಳ ಅಪ್ರಯೋಜಕತೆ ನಿರರ್ಥಕತೆಗಳನ್ನು ಸರ್ವಜ್ಞ ನಮಗೆ ತೋರಿಸಿಕೊಡುವ ರೀತಿ ಮಾನವ ಬದುಕಿನ ಸತ್ಯದ ಸರಿಯಾದ ಮಾರ್ಗವನ್ನು ಕಾಣದಾದಾಗ ಪವಿತ್ರ ಕ್ಷೇತ್ರಗಳಿಗೆ ಯಾತ್ರೆ ಕೈಗೊಳ್ಳುವುದರಿಂದ ಏನು ಪ್ರಯೋಜನ, ಅದರಿಂದ ಏನೂ ಉಪಯೋಗವಿಲ್ಲವೆಂದು ಸಾರುವ ಪರಿಯು ಸಾಮಾಜಿಕ ಜಾಗ್ರತೆಯನ್ನು ಮೂಡಿಸುತ್ತದೆ.

ವಾರಣಾಸಿಗೆ ಹೋಹ । ಕಾರಣವದೇನಯ್ಯ ।
ಕಾರಣ ಪುರುಷನೊಳಗಿರಲು ಅಲೆವುದಕೆ ।
ಕಾರಣವ ಹೇಳು ಸರ್ವಜ್ಞ ॥

ಆಕಸ್ಮಿಕವಾಗಿ ಯಾವುದೋ ಒಂದು ಜಾತಿಯಲ್ಲಿ ಆತ ಹುಟ್ಟಿದ್ದರೂ ಜಾತಿ, ಭಾಷೆ, ಗಡಿಗಳನ್ನು ಮೀರಿನಿಂತ ಸೀಮಾತೀತ ವ್ಯಕ್ತಿತ್ವ ಆತನದು. ನಿಜ ಹೇಳಬೇಕೆಂದರೆ ಸರ್ವಜ್ಞ ಕನಕ, ಶರೀಫರಂಥವರಿಗೆ ಜಾತಿ, ಧರ್ಮಗಳ ಬಂಧನಗಳೇ ಇಲ್ಲ. ಹಾಗಾಗಿಯೇ ಇವರೆಲ್ಲ ಸರ್ವಾಧರಣೀಯರು. ಹಾಗಾಗಿ ಅವರೆಲ್ಲ ಸಾರ್ವಕಾಲಿಕ ದಾರ್ಶನಿಕರಾಗಿ ನಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತಾರೆ. ಲೌಕಿಕ ಸಮಾಜವಾದಿಯಾದ ಸರ್ವಜ್ಞ ಅಂತಃಚಕ್ಷು ಹೊಂದಿದ ಅನುಭಾವಿ, ದಾರ್ಶನಿಕ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ರಾಂತಿಯನ್ನುಂಟು ಮಾಡಿದವನು. ಬಂಡಾಯ ಮನೋಧರ್ಮದ ಈತ ಸಮಾಜದಲ್ಲಿ ಕಂಡದ್ದನ್ನು ಕಂಡ ಹಾಗೆ ಹೇಳಿ ಜನರ ಮನಸ್ಸಿನ ಕಾಯಿಲೆಗಳಿಗೆ ತ್ರಿಪದಿ ಸಾಹಿತ್ಯದ ಮೂಲಕ ದಿವ್ಯೌಷಧಿ ನೀಡಿದ ವೈದ್ಯನಾಗಿದ್ದಾನೆ. ಸಮುದಾಯದ ಜಾಗೃತಿಗಾಗಿ ಮಾತಿನ ಚಾಟಿ ಬೀಸಿದವನು. ಜನಪದ ಸತ್ವದ ತ್ರಿಪದಿ ಬಳಸುವುದರ ಮೂಲಕ ಕನ್ನಡದ ಪ್ರಜ್ಞೆ, ದೇಸಿಯ ಶೈಲಿಯ ರಚನೆ ಹೆಚ್ಚಿಸಿ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸರ್ವಜ್ಞ ಚಿರಸ್ಥಾಯಿಯಾಗಿ ನಿಲ್ಲುತ್ತಾನೆ.

ಸರ್ವಜ್ಞ ಸಾಮಾನ್ಯರಂತೆ ಈ ನೆಲದ ಮೇಲೆ ಬದುಕಿ ಹೋಗಿರುವವನು, ಆದ್ದರಿಂದ ಸರ್ವಜ್ಞನನ್ನು ಇತರ ಮಹಾಕವಿಗಳಂತೆ ಸಮತೂಕದಲ್ಲಿಯೇ ಗುರುತಿಸಬೇಕಾಗುತ್ತದೆ. ಊರೂರು ತಿರುಗಿ ಸಹಸ್ರ ಸತ್ಯಗಳನ್ನು ಕಂಡು ಕೇಳಿ ಅದನ್ನೆ ಜಗತ್ತಿಗೆ ಧಾರೆಯೆರೆದಿರುವುದು ಆತನ ಸಾಹಿತ್ಯದ ವಿಶೇಷವಾಗಿದೆ. ಸರ್ವಜ್ಞ ಹೊಸ ಪರಂಪರೆಯ ನಿರ್ಮಾಣ ಮಾಡಲು ಹೊರಟವನಲ್ಲ. ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಸೆಣಸಾಡಿ ಸಮಕಾಲೀನ ಮೌಲ್ಯಗಳನ್ನು ಅರ್ಥೈಸಿಕೊಂಡು ಯಾವ ನಿರ್ಭಿಡೆಯು ಇಲ್ಲದೆ ಯಾರ ಜೊತೆಯು ರಾಜೀಮಾಡಿಕೊಳ್ಳದೆ, ಯಾರ ದಯೆ, ದಾಕ್ಷಿಣ್ಯಗಳಿಗೆ ಒಳಗಾಗದೇ ನಿಷ್ಠೂರ ಸತ್ಯಗಳನ್ನೇ ತನ್ನ ಸಾಹಿತ್ಯಕ್ಕೆ ಆಕರ ಸಾಮಗ್ರಿಗಳಾಗಿ ತೆಗೆದುಕೊಳ್ಳುತ್ತಾನೆ. ಅವನ ವಚನಗಳಲ್ಲಿ ಅಂತರಂಗದ ತುಡಿತವನ್ನು, ಮಿಡಿತವನ್ನು ಅವಲೋಕಿಸಿದರೆ ಆತನ ಕವಿತ್ವದ ಸಾಮರ್ಥ್ಯ ಗೊತ್ತಾಗುತ್ತದೆ. ನುಡಿಯಲ್ಲಿ ನಡೆಯಲ್ಲಿ ಅಪ್ಪಟನಾಗಿ ಯಾವ ಬೂಟಾಟಿಕೆಗಳಿಗೂ ಒಳಗಾಗದೇ ಸಮಾಜದ ಸೋಗಲಾಡಿತನಗಳಿಗೆ ಚಡಿಏಟು ಕೊಡುತ್ತಾನೆ. ಮೂಢನಂಬಿಕೆ ಡಂಭಾಚಾರದ ಮುಸುಕನ್ನು ತೆಗೆದು ಸತ್ಯದೊಂದಿಗೆ ಸಮೀಕರಿಸಲು ಪ್ರಯತ್ನಿಸುತ್ತಾನೆ.

ದೇಶಭಕ್ತನಾಗಿ ಸಮಾಜ ವಿಮರ್ಶಕನಾಗಿ ಗುರು, ತತ್ವಜ್ಞಾನಿ, ವ್ಯವಹಾರ ನಿಪುಣನಾಗಿ ಮಿತ್ರನಾಗಿ ಮಾತೃ ಸ್ವರೂಪದ ಉಪದೇಶ ನೀಡುತ್ತಾನೆ. ಮಾನವನ ಜೀವನವನ್ನು ಸಮಗ್ರವಾಗಿ ನೋಡುತ್ತಾನೆ. ಸಮಾಜದ ಎಲ್ಲ ದ್ವಂದ್ವಗಳನ್ನು ಧೈರ್ಯದಿಂದ ಸಮನ್ವಯಗೊಳಿಸುವ ವಿಶಿಷ್ಟ ದೂರದೃಷ್ಟಿ ಈತನ ವಚನಗಳಲ್ಲಿದೆ. ಈತನ ತ್ರಿಪದಿಗಳಲ್ಲೇನಿದೆ? ಎನ್ನುವುದಕ್ಕಿಂತ ಏನಿಲ್ಲ ಎಂಬಂತೆ ರಚಿತವಾಗಿವೆ. ಸಾಮಾಜಿಕ ಕಳಕಳಿ ಬದುಕಿನ ಮೌಲ್ಯಗಳು, ಧರ್ಮ ಸಮನ್ವಯತೆ, ಕೌಟುಂಬಿಕ ಜೀವನದ ಸಾಮರಸ್ಯತೆ, ಹೇಡಿಗೆ ಆತ್ಮ ಸ್ಥೈರ್ಯ ತುಂಬುವ, ನಿರಾಶಾವಾದಿಗಳನ್ನು

ಆಶಾವಾದಿಗಳನ್ನಾಗಿ ಮಾಡಬಲ್ಲ ಜೀವನ ಮೌಲ್ಯಗಳನ್ನು ಭರವಸೆಗಳನ್ನು ಮೂಡಿಸುವ ಇವನ ಕವಿತಾ ಶಕ್ತಿ ವಿಶಾಲ ವಿಶ್ವಭಾವನೆಯ ಬಾಗಿಲು ತೆರೆಸುತ್ತದೆ.

ಇಂತಹ ವಿಶ್ವ ಬಂಧುತ್ವ ಸಂದೇಶ ಸಾರಿದ ಮಹಾಚೇತನ ಸರ್ವಜ್ಞ ಪ್ರಧಾನವಾಗಿ ವಿರಕ್ತ ಹಾಗೂ ಅಧ್ಯಾತ್ಮ ಸಾಧಕ. ಅವನು ಒಂದೆಡೆ ನೆಲೆ ನಿಂತವನಲ್ಲ, ನೆರಳು ಬೇಕೆಂದವನಲ್ಲ, ಬಿಸಿಲು ಮಳೆಗಳಿಗೆ ಅಂಜಿದವನಲ್ಲ, ಮನೆ ಮನೆಯ ಮುದ್ದೆ, ಮಾರಿಗುಡಿಯ ನಿದ್ದೆ, ಸಿಕ್ಕರೂ ಸರಿ, ಸಿಗದಿದ್ದರೂ ಸಂಕಟವಿಲ್ಲ. ಹೀಗಿದ್ದೂ ಅವನ ಅಧ್ಯಾತ್ಮ ಸಾಧನೆಯ ಮೆಟ್ಟಿಲುಗಳನ್ನು ಸಹ ಅವನ ವಚನಗಳಿಂದಲೆ ಗುರುತಿಸಬಹುದು. ಅವನು ಗುರು ಮಹಿಮೆಯನ್ನು ವಿಸ್ತಾರವಾಗಿ ವಿವರಿಸಿದರೂ ಅವನಿಗೆ ಲಿಂಗದೀಕ್ಷೆ ಕೊಟ್ಟ ಗುರು ಯಾರು ಎನ್ನುವುದು ಮಾತ್ರ ಅವನ ವಚನಗಳಿಂದ ತಿಳಿದು ಬಂದಿರುವುದಿಲ್ಲ. ಈ ಸತ್ಯಕಾಮನಾದ ಸ್ವಯಂಸಿದ್ಧನಿಗೆ ಗುರೂಪದೇಶದ ಅಗತ್ಯವಿರಲಿಲ್ಲ. ಸುತ್ತಣ ಸಮಾಜ ಹಾಗೂ ವಿಶಾಲವಾದ ಲೋಕವೇ ಅವನ ಗುರುವಾಗಿತ್ತು, ಗುರುಮುಖದಿಂದಲ್ಲದೆ ಮುಕ್ಕಣ್ಣನನ್ನ ಅರಿಯಲಾಗದು ಎಂದು ಘೋಷಿಸುತ್ತಾನೆ.

ಮಂಡೆ ಬೋಳಾದಡೇನು ದಂಡ ಕೋಲ್ವಿಡಿದಡಂ
ಹೆಂಡತಿಯ ಬಿಟ್ಟು ನಡೆದೊಡಂ
ಗುರುಮುಖದ ಕಂಡಲ್ಲದಿಲ್ಲ ಸರ್ವಜ್ಞ॥

"ಸತ್ಯದ ದಾರಿಯನು ಯಾರು ತೋರಿದರೇನು? ಊರಿಂಗೆ ದಾರಿಯನು ಯಾರು ತೋರಿದಡೇನು, ಸಾರಾಯದ ನಿಜವ ತೋರುವ ಗುರುವು ತಾನಾರಾದಡೇನು ಸರ್ವಜ್ಞ" ನಿಜದ ಅರಿವನ್ನು ತೋರಿದಾತನೆ ಗುರುವಾಗುತ್ತಾನೆ. ಇಂದಿನ ಗುರುಗಳ ಚಿತ್ರಣವನ್ನು ಕಣ್ಣಮುಂದೆ ತೆಗೆದುಕೊಂಡಾಗ ಈ ಮಾತಿನ ಅರ್ಥವಾದೀತು. ಪರತತ್ವ ತನ್ನೊಳಗೆ ಎರವಿಲ್ಲದಿರುತಿರ್ದು ಪರದೇಶಿಯಂತಿರ್ಪ ಯೋಗಿಯನು ಪರಮ ಗುರುವೆಂಬ ಸರ್ವಜ್ಞ, ತನ್ನ ತಾನರಿತರೇ ಗುರುವೇಕೆ ಬೇಕು, ಅವನೆ ಪರದೇಶಿಯಾಗಿರುವಾಗ ನಮಗೆ ಸನ್ಮಾರ್ಗ ತೋರಿಸುವನೇ? ಎಂಬ ದಿವ್ಯದೃಷ್ಟಿ ಸರ್ವಜ್ಞನದು. ಸರ್ವಜ್ಞನರುಹಿದ ಸತ್ಯ, ಧರ್ಮ, ನೀತಿ, ವಿಶ್ವಮಾನವತೆಯ ಸಾರದಂತೆ ತೋರುತ್ತವೆ.

ಜಾತಿ ಸೂತಕವಳಿದು, ಬ್ರಾಂತಿಯ ಗುಣವಳಿದು
ಆತುಮನ ನೆಲೆಯರಿತು ನಿಂದವಗೆ
ಯಾತರದ ಚಿಂತೆ-ಸರ್ವಜ್ಞ ॥

ಜಾತಿಯನು ತ್ಯಜಿಸಿ ಭ್ರಾಂತಿಯನು ಬಿಟ್ಟು ತನ್ನ ಆತ್ಮದ ನೆಲೆಯನ್ನು ಅರಿತು ಜಗದ ಕಲ್ಯಾಣ ಬಯಸುವ ಜೀವಿಯೇ ಜಂಗಮನೆನಿಸಿಕೊಳ್ಳುತ್ತಾನೆ. ವೀರಶೈವ ಧರ್ಮದ ಜೀವಾಳವೇ ಜಂಗಮ. ಗುರು-ಲಿಂಗ-ಜಂಗಮ ಈ ತ್ರಿವೇಣಿ ಸೂತ್ರಗಳು ಲಿಂಗಧಾರಿಯ ಬಾಳನ್ನು ಸುಸೂತ್ರವಾಗಿ ಸಾಗಿಸುವುದಕ್ಕೆ ಸಹಾಯಕವಾಗಿವೆ.

ಅರಿವಿನಾ ಅರಿವು ತಾ । ಧರೆಯೊಳಗೆ ಮೆರೆದಿಹುದು ।
ಅರಿವಿನಾ ಅರಿವ ಹರಿ ಹರ ಬೊಮ್ಮರು ।
ಅರಿಯರೈ ಕಾಣಯ್ಯ ಸರ್ವಜ್ಞ ॥

ಅರಿವೇ ಗುರು ನಮ್ಮರಿವಿನಿಂದಲೇ ಜಗದರಿವಾಗುತ್ತದೆ ಅರಿವಿನಾ ಅರಿವನ್ನು ಹರಿ ಹರ ಬ್ರಹ್ಮರೂ ಅರಿತಿಲ್ಲ ಇನ್ನು ಸಾಮಾನ್ಯರ ಪಾಡೇನು, ಹೀಗೆ ಅರಿವಿನ ಮಹಿಮೆ ಎಲ್ಲದಕ್ಕೂ ಕಾರಣ ಅರಿತು ನಡೆದರೆ ಸ್ವರ್ಗ ಮರೆತು ನಡೆದರೆ ನರಕ ಆದ್ದರಿಂದ ಪ್ರತಿಯೊಬ್ಬರೂ ಅರಿತು ನಡೆಯಬೇಕು.

ಜನಕೆ ರಂಜನೆ ಲೇಸು । ವನಕೆ ಪುಷ್ಪವು ಲೇಸು ।
ಧನಕಿಂದ ಬುದ್ದಿನೆರೆ ಲೇಸು, ಬುದ್ದಿಯಿಂ ।
ಅನುಭಾವ ಲೇಸು ಸರ್ವಜ್ಞ ॥

ಹೀಗೆ ಸರ್ವಜ್ಞ ತನ್ನ ಲೋಕಾನುಭವಗಳನ್ನು ಸಮಾಜದ ವಿಮರ್ಶೆಯನ್ನು ಸಮರ್ಥವಾಗಿ ಮಾಡುತ್ತಲೇ ಲೋಕದ ಜನರಿಗೆ ಆದರ್ಶದ ವ್ಯಕ್ತಿಯಾಗಿ ನೆಲೆಗೊಂಡಿದ್ದಾನೆ. ಸರ್ವಜ್ಞನ ಲೋಕಾನುಭವ ವಿಸ್ತಾರವಾದುದು ಜನಪದರ ಪ್ರತಿನಿಧಿಯಾಗಿ ಸರ್ವಜ್ಞ ಹೇಳದ ವಿಷಯಗಳಿಲ್ಲ. ಒಳ್ಳೆಯದನ್ನು ಮೆಚ್ಚುವ ಒಳ್ಳೆಯದಲ್ಲದನ್ನು ನಿರ್ಭೀತಿಯಿಂದ ವಿಮರ್ಶಿಸುವ ಸಮತೂಕದ ವ್ಯಕ್ತಿತ್ವ ಹೊಂದಿದ ಕನ್ನಡದ ನಿಜವಾದ ಅನುಭಾವಿ ಕವಿಗಳಲ್ಲಿ ಪ್ರಮುಖನೆನಿಸಿದ್ದಾನೆ. ಸರ್ವಜ್ಞ ಜಾನಪದ ಸಾಹಿತ್ಯದ ಸಾರ್ವಭೌಮ ಸರ್ವಜ್ಞ ಕನ್ನಡದ ವಿಶಿಷ್ಟ ಕವಿ. ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳೆರಡರ ಸಂಗಮವಾಗಿ ಕಂಗೊಳಿಸುತ್ತಾನೆ. ಈತನನ್ನು ಶಿಷ್ಟ ಕವಿಯಂತಲು, ಜನಪದ ಕವಿಯಂತಲು ಕರೆಯುತ್ತಾರೆ. ಕೆಲವರಿಗೆ ಶಿಷ್ಟ ಕವಿ ಎನಿಸಿದರೆ, ಇನ್ನೂ ಹಲವರಿಗೆ ಜನಪದ ಕವಿಯಾಗಿ ಗೋಚರಿಸಿದ್ದಾನೆ. ವಚನಕಾರರ, ಕೀರ್ತನಕಾರರ ಹಾಗೂ ವಾಗ್ಗೇಯಕಾರರ ಪರಂಪರೆಯನ್ನು ಅನುಸರಿಸಿ ಶಿಷ್ಟ ಕವಿಯೆನಿಸಿದ್ದರೆ, ನುಡಿಗಟ್ಟು, ಗಾದೆ, ಒಗಟುಗಳು ದೇಶಿಭಾಷೆಯ ಯಥೇಚ್ಛ ಬಳಕೆ ಮಾಡಿ ಜನಪದ ಕವಿ ಎನಿಸಿದ್ದಾನೆ.

ಶ್ರೀ ಸಾಮಾನ್ಯನ ಮನಮುಟ್ಟುವಂತೆ ಮಾತನಾಡುವ ಜನಪರ ಕವಿಗಳನ್ನು ಹೆಸರಿಸುವಾಗ ಕನ್ನಡದ ಸರ್ವಜ್ಞ, ತಮಿಳಿನಲ್ಲಿ ತಿರುವಳ್ಳುವರ್, ತೆಲುಗಿನ ಮೇಮನ, ಮತ್ತು ಹಿಂದಿಯ ಕಬೀರ ರನ್ನು ಸಮೀಕರಿಸುವುದು ಸಾಮಾನ್ಯ. ಕನ್ನಡ ಸಾಹಿತ್ಯ ಲೋಕದ ಈ ಸರ್ವಜ್ಞ ಯಾರು, ಯಾವಾಗ ಇದ್ದ, ಎಲ್ಲಿದ್ದ, ಎಲ್ಲವೂ ನಿಗೂಢವಾದರೂ ಜೀವನ ಚಿತ್ರಣದಲ್ಲಿ ವಿವರವಾಗಿ ಸಮೀಕ್ಷಿಸಲಾಗಿದೆ. ವೇಮನ ಸರ್ವಜ್ಞರು ದಕ್ಷಿಣ ಭಾರತದ ಮೂರು ಸಹೋದರ ಭಾಷೆಗಳ ಪ್ರತಿನಿಧಿಗಳಂತಿದ್ದು ನೈತಿಕ ಸಾಹಿತ್ಯವನ್ನು ಒದಗಿಸಿದವರಲ್ಲಿ ಪ್ರಮುಖರೆನಿಸಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೂವರು ಕನ್ನಡ ಕವಿಗಳು ಕವಿ ಚಕ್ರವರ್ತಿ ಎಂಬ ಬಿರುದಿನಿಂದ ಪುರಸ್ಕೃತಗೊಂಡಿದ್ದರು ನಾವು ಸರ್ವಜ್ಞನನ್ನು ಜಾನಪದ ಕವಿಚಕ್ರವರ್ತಿ ಎಂದು ಕರೆಯಬೇಕಾಗಿದೆ.

"ಮಾತಿನಿಂದಲೇ ನಗೆ, ಮಾತಿನಿಂದಲೇ ಹಗೆ, ಮಾತಿನಿಂದಲೇ ಸರ್ವ ಸಂಪದವು, ಮಾತೇ ಮಾಣಿಕ್ಯವು ಸರ್ವಜ್ಞ," ಮಾತನ್ನು ಕುರಿತು ಹೇಳುವಾಗ ಅಪ್ಪಟ ಜಾನಪದೀಯ ಭಾಷೆಯನ್ನೇ ಬಳಕೆ ಮಾಡಿ ಮಾತೆಂಬುದು ಜ್ಯೋತಿರ್ಲಿಂಗ, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು, ಎಂಬಂತೆ ಮಾನವನ ದಿನನಿತ್ಯದ ನಗೆಗೂ, ಹಗೆಗೂ ಹಾಗೂ ಅವನ ಸರ್ವ ಸಂಪತ್ತಿಗೂ ಮಾತೇ ಕಾರಣವಾಗುತ್ತದೆ. ಮಾತಿನ ಮಹಿಮೆಯನ್ನು ಸಾಮಾನ್ಯ ಜನರಾಡುವ ಭಾಷೆಯಲ್ಲಿಯೇ ಉಪದೇಶಿಸಿದ್ದನ್ನು ಕಾಣುತ್ತೇವೆ.

ಮಾತು ಮಾಣಿಕ ಮುತ್ತು । ಮಾತು ತಾ ಸದರವು ।
ಮಾತಾಡಿದಂತೆ ನಡೆದರೆ ಕೈಲಾಸ ।
ಕಾತನೇ ಒಡೆಯ ! ಸರ್ವಜ್ಞ ॥

ಲೋಕ ಸಂಚಾರಿಯಾದ ಸರ್ವಜ್ಞ ಹಳ್ಳಿ, ಪಟ್ಟಣಗಳಲ್ಲಿ ಸಂಚರಿಸಿದ್ದುಂಟು. ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶದ ಜನರ ಆಹಾರ ಪಾನೀಯ ಪದ್ಧತಿಗಳು ತುಂಬಾ ಭಿನ್ನವಾಗಿವೆ. ಊಟಮಾಡುವ ಅಕ್ಕಿ, ಪಾನ ಮಾಡುವ ಚಹಾ, ಕಾಫಿ, ಹಾಗೂ ಜೋಳ, ರಾಗಿ, ನವಣೆ, ಅಂಬಲಿ, ಗಂಜಿ ಮೊದಲಾದ ಬಡವರ ಗ್ರಾಮೀಣ ಆಹಾರ ಪಾನೀಯಗಳಾಗಿರುವವು ಎಂಬುದನ್ನು ತನ್ನ ತ್ರಿಪದಿಯ ಮೂಲಕ ಅವರು ಅದನ್ನು ಹೇಗೆ ಸೇವಿಸುತ್ತಾರೆ ಎಂಬುದನ್ನು ಮನ ಮುಟ್ಟುವಂತೆ ನಿರೂಪಿಸುತ್ತಾನೆ. ಲೋಕಕ್ಕೆ ಕೆಂಡವಾಗಿ ನಿಂತರೂ, ಅಖಂಡ ಖಂಡಿತವಾದಿಯಂತೆ ಮುನ್ನುಗ್ಗುವ ಸ್ವಭಾವ ಆತನದು. ಇಡೀ ಲೋಕವನ್ನು ಪರಿವರ್ತನೆ ಮಾಡಬೇಕೆಂದು ಹೊರಟವನಿಗೆ ಕಟುವಾಗಿ ಮಾತನಾಡುವ ನೈತಿಕ ಶಕ್ತಿ ಇದ್ದೇ ಇರುತ್ತದೆ. ತನ್ನ ಹರಿತವಾದ ನಾಲಗೆಯನ್ನು ಆಯುಧದಂತೆ ಬಳಸುತ್ತಾನೆ.

## ಆಧಾರ ಗ್ರಂಥಗಳು


೧. **ಜಂಗಮಜ್ಯೋತಿ ಶತಮಾನ ಮಹೋತ್ಸವ ಸ್ಮರಣ ಸಂಚಿಕೆ:** ಸಂ.ಎಚ್.ದೇವೀರಪ್ಪ.–೧೯೭೫

೨. **ಕನ್ನಡ ಸಾಹಿತ್ಯ ಸಂಗಾತಿ:** ಕೀರ್ತಿನಾಥ ಕುರ್ತಕೋಟಿ ಕು ಮೆ ಟ್ರಸ್ಟ್ ಧಾರವಾಡ–೨೦೧೬

೩. **ಕನ್ನಡ ಸಾಹಿತ್ಯ ಚರಿತ್ರೆ:** ತ.ಸು.ಶ್ಯಾಮರಾಯ ತ.ವೆಂ ಸ್ಮಾ ಗ್ರಂಥಮಾಲೆ ಮೈಸೂರು –೨೦೦೧

೪. **ಕನ್ನಡ ಸಾಹಿತ್ಯ ಚರಿತ್ರೆ:** ರಂ.ಶ್ರೀ.ಮುಗಳಿ ಉಷಾ ಸಾಹಿತ್ಯ ಮಾಲೆ–೧೯೭೧

೫. **ಸರ್ವಜ್ಞನ ವಚನಗಳು:** ಎಲ್.ಬಸವರಾಜು ಸಪ್ನ ಬುಕ್ ಹೌಸ ಬೆಂಗಳೂರು –೨೦೧೬

೬. **ಸರ್ವಜ್ಞನ ವಚನಗಳು:** ಸಂ.ಚನ್ನಪ್ಪ ಉತ್ತಂಗಿಯವರ..ಪ್ರಕಾಶ ಸಾಹಿತ್ಯ ಬೆಂಗಳೂರು. ೨೦೧೬.

೭. **ಜಂಗಮ ಕವಿ ಸರ್ವಜ್ಞ:** ಡಾ.ಬಿ.ಜಿ.ಚನ್ನೇಶ ಹೊನ್ನಾಳಿ.ಸಿಂಚನ ಗ್ರಂಥಮಾಲೆ ಹಾವೇರಿ.೨೦೦೮

೮. **ಕರ್ನಾಟಕದ ಸರ್ವಜ್ಞ: ಜನತೆಯ ಕವಿ. ಸರ್ವಜ್ಞನ ಸಾಹಿತ್ಯ ಕುರಿತ ಅಧ್ಯಯನಗಳು**. ಸಂ.ವೀರೇಶ ಬಡಿಗೇರ. ಕ.ವಿ.ವಿ.ಹಂಪಿ.–೨೦೧೪.

೯. **ಸರ್ವಜ್ಞ ಒಂದು ಅಧ್ಯಯನ:** ದೇಜಗೌ ಕರ್ನಾಟಕ ಪ್ರಕಶನ ಮಂದಿರ ನಿಯಮಿತ. ಬೆಂಗಳೂರು –೧೯೭೪

೧೦. **ಜಾನಪದ ಸಾಹಿತ್ಯ:** ಪ್ರಸಾರಂಗ ಕ ವಿ ವಿ ಧಾರವಾಡ.

೧೧. **ಜಾನಪದ ಸಿಂಹಾವಲೋಕನ:** ಕರ್ನಾಟಕ ವಿ ವಿ ಧರವಾಡ.

೧೨. **ಸರ್ವಜ್ಞ :** ಜಿ.ಎಸ್.ಶಿವರುದ್ರಪ್ಪ.

೧೩. **ಮಾರ್ಗ–೨:** ಡಾ.ಎಂ.ಎಂ.ಕಲಬುರ್ಗಿ. ಸಪ್ನ ಬುಕ್‌ಹೌಸ್ ಬೆಂಗಳೂರು